ಪ್ರಶ್ನೆಯಾಯಿತು. ಕೊನೆಗೆ ಅವಳಿಗೆ ಅನಿಸಿದ್ದೇನೆಂದರೆ ಏನಾದರೂ ಇರಲಿ ರಾಜಪ್ಪ ಸಾಮಿ ಏನೋ ತಪ್ಪು ಮಾಡಿದ್ದಾನೆ. ಅದನ್ನು ನಾನು ನೋಡಿದ್ದೇನೆಂದು ತಪ್ಪು ತಿಳಿದು ತನ್ನ ಬಾಯಿ ಮುಚ್ಚಿಸಲು ಆಗಾಗ ಹಣ ನೀಡಿದ್ದಾನೆ ಎಂದು ತರ್ಕಿಸಿದಳು.

ಆ ಸಮಯದಲ್ಲಿ ತಲೆಯಲ್ಲಿ ಮಿಂಚೊಂದು ಹರಿದಂತಾಗಿ ರಾಮಕ್ಕ ಎದ್ದು ಕುಳಿತಳು. ಹಾಗಾದರೆ ಊರಲ್ಲಿ ಯಾರ್ಯಾರು ತಪ್ಪು ಮಾಡುತ್ತಿದ್ದಾರೆ ಎಂದು ಪತ್ತೆ ಹಚ್ಚಿದರೆ ಅವರಿಂದಲೂ ಒಂದಷ್ಟು ಕಾಸು ಕೀಳಬಹುದು ಎಂಬ ಆಲೋಚನೆ ಹೊಳೆಯಿತು. ಆ ಕ್ಷಣದಿಂದ ಹಣ ಮಾಡುವಂತಹ ಒಂದು ಸುಲಭ 'ನವೋದ್ಯಮ'ದ ರೂಪರೇಷೆಗಳು ರಾಮಕ್ಕನ ತಲೆಯಲ್ಲಿ ರೂಪುಗೊಳ್ಳತೊಡಗಿದವು.

ಮೊದಮೊದಲು ಆ ಊರಿನಲ್ಲಿ ಹಾಗೇನೂ ದೊಡ್ಡ ಅಪರಾಧವು ಘಟಿಸದೆ ರಾಮಕ್ಕನ ನವೋದ್ಯಮಕ್ಕೆ ಹಿನ್ನೆಡೆಯಾದರೂ ಕೆಲವೇ ದಿನಗಳಲ್ಲಿ ಆಕೆ ಎದುರಿನವರ ಬಲಹೀನತೆಯನ್ನು ಗ್ರಹಿಸುವ ಕೌಶಲವನ್ನು ಕರಗತ ಮಾಡಿಕೊಂಡಳು. ಆ ಬಳಿಕ ಆಕೆಯ ನವೋದ್ಯಮವು ಕುದುರತೊಡಗಿತು. ಕೆಲವರ ಬಲಹೀನತೆ, ಕಳ್ಳಾಟಗಳನ್ನೆಲ್ಲ ಕೇವಲ ವಾಸನೆಯ ಮೂಲಕವೆ ಗ್ರಹಿಸಿ ಕಂಡುಕೊಳ್ಳುವ ಶಕ್ತಿಯು ರಾಮಕ್ಕನಿಗೆ ಕರಗತವಾದ ಕಾರಣ ಅವಳ ಹೊಸ ಉದ್ಯಮವು ಹುಲುಸಾಗಿ ಬೆಳೆಯತೊಡಗಿತು. ಊರಲ್ಲಿ ಸಣ್ಣಪುಟ್ಟ ತಪ್ಪು ಮಾಡಿದವರು ಅವಳ ಕೈಗೆ ಸಿಕ್ಕು ಹಣ ಕಳೆದುಕೊಂಡು ನಂತರ ಹುಶಾರಾಗತೊಡಗಿದರು. ಕೆಲವರು ತಮ್ಮಲ್ಲಿದ್ದಷ್ಟು ಹಣ ಅವಳ ಕೈಗೆ ಹಾಕಿ ತಪ್ಪಿಸಿಕೊಂಡರೆ ರಾಮಕ್ಕನೇ ಕೆಲವರ ಬಳಿ ಒತ್ತಾಯ ಮಾಡಿ ಕೆಲ ಉಡುಗೊರೆಗಳನ್ನು ಪಡೆದುಕೊಳ್ಳುತ್ತಿದ್ದಳು. ಯಾರದ್ದಾದರೂ ಮದುವೆಗೆ ಹೋಗಲು ಅವಳು ಉಡುತ್ತಿದ್ದ ರೇಶ್ಮೆ ಸೀರೆ, ಮೂಗಿನ ಮೇಲೆ ಈಚೆಗೆ ಕಾಣಿಸಿಕೊಳ್ಳುತ್ತಿದ್ದ ಚಿನ್ನದ ನತ್ತು, ಕೈನಲ್ಲಿ ನಳನಳಿಸುತ್ತಿದ್ದ ಒಂದು ಟಚ್ ಸ್ಕ್ರೀನ್ ಮೊಬೈಲು ಇಂತವೆಲ್ಲ ಅವಳ ನವೋದ್ಯಮದ ಗಳಿಕೆಗಳೆ ಆಗಿದ್ದವು. ಜೀವನಕ್ಕೆ ಹೇಗೂ ಇಟ್ಟಿಗೆ ಭಟ್ಟಿಯ ಸಂಬಳವು ಇದ್ದುದರಿಂದ ಮೇಲಾದಾಯವು ಅವಳು ಹೊಸತಾಗಿ ರೂಢಿಸಿಕೊಂಡಿದ್ದ ಶೋಕಿ ಜೀವನಕ್ಕೆ ಆಗುತ್ತಿತ್ತು. ಈ ರೀತಿಯ ವಸೂಲಾತಿಯು ಅವಳ ಬಲೆಗೆ ಬಿದ್ದವರ ಅಪರಾಧದ ತೀವ್ರತೆಯ ಮೇಲೆ ನಿರ್ಧಾರಿತವಾಗುತ್ತಿದ್ದುದರಿಂದ ರಾಮಕ್ಕನೀಗ ದೊಡ್ಡ ದೊಡ್ಡ ತಪ್ಪುಗಳು ಎಲ್ಲಿ ಘಟಿಸುತ್ತವೆ ಎಂದು ಹುಡುಕಿಕೊಂಡೇ ಇರುತ್ತಿದ್ದಳು.

ಇತ್ತೀಚೆಗೆ ಹಳ್ಳಿಯಲ್ಲಿ ಯಾವುದೇ ತೀವ್ರ ತರಹದ ಅಪರಾಧ ಘಟನೆಗಳು ನಡೆಯದೆ ರೋಮಾಂಚನಗೊಳ್ಳಲು ಅವಕಾಶವಿಲ್ಲದೆ ರಾಮಕ್ಕನು ಚಡಪಡಿಸುತ್ತಿದ್ದಾಗ ಶೇಖರಪ್ಪನ ಹೆಂಡತಿ ನಂಜಮ್ಮನು ಗಂಡನು ವ್ಯವಹಾರ ನಿಮಿತ್ತ ಪೇಟೆಗೆ ಹೋದ ದಿನ ಮಧ್ಯಾಹ್ನದ ನಂತರ ಸಂಜೆಯವರೆಗೂ ಮನೆಯಲ್ಲಿರದೆ ಕಣ್ಮರೆಯಾಗುತ್ತಾಳೆಂಬ ವಿಷಯವು ಗಾಳಿಯಲ್ಲಿ ಬಂದು ಅವಳ ಮೂಗಿಗೆ ಬಡಿದ ಕಾರಣ ಜಾಗೃತಳಾದಳು.

ನಂಜಮ್ಮ ಶೇಖರಪ್ಪನ ಎರಡನೆ ಹೆಂಡತಿ. ಎರಡನೆ ಹೆಂಡತಿಯಾದ್ದರಿಂದ ಸಹಜವಾಗೆ ಗಂಡಹೆಂಡಿರಲ್ಲಿ ವಯಸ್ಸಿನ ಅಂತರ ಹೆಚ್ಚಾಗಿದ್ದು ಶೇಖರಪ್ಪನಿಗೆ ಹೋಲಿಸಿದರೆ ನಂಜಮ್ಮ ತೀರಾ ಎಳೆಯ ವಯಸ್ಸಿನವಳಾಗಿದ್ದಳು. ಆದರೂ ಎರಡನೆ ಸಂಬಂಧವಾಗಿದ್ದರೂ ಅವನ ಆಸ್ತಿಯು ಪೊಗದಸ್ತಾಗಿಯೆ ಇದ್ದುದರಿಂದ ಚಿಕ್ಕವಯಸ್ಸಿನಿಂದಲೂ ಶ್ರೀಮಂತಿಕೆಯ ಜೀವನಕ್ಕೆ ಆಸೆ ಪಡುತ್ತಿದ್ದ ಅವಳು ಆಸ್ತಿಯನ್ನು ನೋಡಿಯೆ ಮದುವೆಯಾಗಿ ಬಂದಿದ್ದಳು. ಮದುವೆಯಾದ ಮೊದಲಲ್ಲಿಯೆ ನಂಜಮ್ಮನ ಪ್ರಾಯವು ಏರು ಹಾದಿಯಲ್ಲಿಯೂ, ಮಧ್ಯವಯಸ್ಸು ಸಮೀಪಿಸಿದ್ದ ಶೇಖರಪ್ಪನ ಯೌವನವು ಇಳಿಜಾರಿನಲ್ಲಿಯೂ ಇದ್ದ ಕಾರಣ ಏನಾಗಬೇಕೋ ಅದೇ ಆಗಿತ್ತು.

ಗಂಡ ಊರಲ್ಲಿಲ್ಲದಾಗ ಅವಳು ಎಲ್ಲಿ ಹೋಗುತ್ತಾಳೆಂದು ಪತ್ತೇದಾರಿಕೆ ಆರಂಭಿಸಿದ ರಾಮಕ್ಕನಿಗೆ ಅವಳು ಬೇರೆಲ್ಲೂ ಹೋಗದೆ ಅವಳ ತೆಂಗಿನ ತೋಟದಲ್ಲಿದ್ದ ಮನೆಗೆ ಹೋಗಿ ಸಂಜೆಗೆ ವಾಪಾಸು ಬರುತ್ತಾಳೆಂಬ ವಿಷಯವು ಗ್ರಹೀತವಾಯಿತು.

ಹಾಗೆ ನೋಡಿದರೆ ಅವಳು ತೋಟದ ಮನೆಗೆ ಹೋಗಿ ಬರುವುದರಲ್ಲಿ ಯಾವ ಅಪರಾಧವೂ ಇಲ್ಲವಷ್ಟೆ? ಆದರೂ ಶೋಕಿ ಮಾಡುವುದು ಬಿಟ್ಟು ತೋಟಕ್ಕೆ ಹೋಗಿ ಅಲ್ಲಿನ ಕೆಲಸ ಕಾರ್ಯಗಳ ಉಸ್ತುವಾರಿ ವಹಿಸುತ್ತಾಳೆಂದರೆ ಅದನ್ನು ನಂಬುವ ಜಾಯಮಾನ ರಾಮಕ್ಕನದಾಗಿರಲಿಲ್ಲ. ಅಲ್ಲದೆ ತೆಂಗಿನ